

ಚಿತ್ರ: ಶಶಿಧರ ಹಳೇಮನಿ

# ಮಾನವನಾಗುವೆಯೊ ಇಲ್ಲ ಪ್ರಾಣಿಯಾಗುವೆಯೊ...!

■ ವಿ. ವಿಜಯೇಂದ್ರ ರಾವ್

ಒಂದೂರಿನ ನದಿ ತಟದಲ್ಲಿ ಒಬ್ಬರು ಜ್ಞಾನಿ, ಸ್ವಾಮೀಜಿಯವರು ಆಶ್ರಮ ಕಟ್ಟಿಕೊಂಡು ತಮ್ಮ ಶಿಷ್ಯ ವರ್ಗದೊಂದಿಗೆ ವಾಸಿಸುತ್ತಿದ್ದರು. ಆ ಊರಿನಲ್ಲಿ ಪ್ರಸಿದ್ಧ ದೇವಾಲಯವು ಇದ್ದುದ್ದರಿಂದ ಅನೇಕ ಜನರು ಬಂದು ಹೋಗಿ ಮಾಡುತ್ತಿದ್ದರು.

ಒಮ್ಮೆ ಆ ಊರಿಗೆ ಬಂದ ಅಯ್ಯಪ್ಪನ ಭಕ್ತಾದಿಗಳು, ಆ ಸ್ವಾಮೀಜಿಯವರ ಬಗ್ಗೆ ತಿಳಿದು, ಅವರ ದರ್ಶನ ಪಡೆದು ಹೋಗೋಣವೆಂದು ಅಲ್ಲಿಗೆ ಬಂದರು. ಅವರು ಹೃತ್ಪೂರ್ವಕವಾಗಿ ಸ್ವಾಗತಿಸಿ, ಆಗ ಮಧ್ಯಾಹ್ನದ ಊಟದ ಸಮಯವಾಗಿದ್ದರಿಂದ ಎಲ್ಲರಿಗೂ ಕೈಕಾಲು ತೊಳೆದು ಊಟಕ್ಕೆ ಬನ್ನಿರೆಂದು ಪ್ರೀತಿಯಿಂದ ಆಹ್ವಾನಿಸಿದರು.

ಎಲ್ಲರೂ ಊಟಕ್ಕೆ ಕುಳಿತ ನಂತರ, ನನ್ನದೊಂದು ಸಣ್ಣ ಪ್ರಶ್ನೆಯಿದೆ, ಏನೆಂದರೆ ತಾವು ಮನುಷ್ಯರ ಹಾಗೆ ತಿನ್ನ ಬಯಸುತ್ತೀರೊ ಅಥವಾ ಪ್ರಾಣಿಯಂತೆ ತಿನ್ನ ಬಯಸುತ್ತೀರೊ? ಎಂದು ಕೇಳಿದಾಗ, ಅವರೆಲ್ಲರೂ ಒಂದು ನಿಮಿಷ ಏನೂ ಅರ್ಥವಾಗದೆ, ನಂತರ ಸಾವರಿಸಿಕೊಂಡು 'ಯಾಕೆ ಹಾಗೆ ಕೇಳುತ್ತೀರಾ? ನಾವೆಲ್ಲರೂ ಮನುಷ್ಯರು ತಾನೇ, ಅದಕ್ಕೆ ಮನುಷ್ಯರ ತರಾನೇ ತಿನ್ನುತ್ತೀವಿ' ಎಂದು ಒಮ್ಮತದಿಂದ ಹೇಳಿದಾಗ, ಅವರು ನಸುನಕ್ಕು 'ನಂಗೊತ್ತು ನೀವು ಮನುಷ್ಯರು ಅಂತ, ಆದರೆ, ನಾವು ಮನುಷ್ಯರ ಹಾಗೆ ತಿನ್ನದೆ ಪ್ರಾಣಿಗಳ ಹಾಗೆ ತಿಂದರೆ, ನಮಗೂ ಕ್ಷೇಮ ಮತ್ತು ಆರೋಗ್ಯಕ್ಕೂ ಒಳ್ಳೆಯದು' ಎಂದರು. ಅವರ ಮಾತಿನ ತಲೆ ಬುಡ ಅರ್ಥವಾಗದೆ, 'ಸ್ವಾಮೀಜಿಗಳೇ ಸ್ವಲ್ಪ ಅರ್ಥವಾಗುವಂತೆ ಹೇಳಿ' ಎಂದು ಒಕ್ಕೊರಲಿನಿಂದ ಕೇಳಿದರು.

ಆಗ ಸ್ವಾಮೀಜಿಗಳು ನೋಡಿ, ಪ್ರಾಣಿ, ಪಕ್ಷಿಗಳು ಯಾವತ್ತೂ ಹಸಿವಾಗದೆ ತಿನ್ನುವುದಿಲ್ಲ, ಅವುಗಳ ಆಹಾರ ಅವೇ ಹುಡುಕಿಕೊಂಡು ಎಷ್ಟುಬೇಕೋ ಅಷ್ಟೇ ತಿನ್ನುತ್ತವೆ. ತಮ್ಮ ಆಹಾರ ಏನೋ ಅದನ್ನಷ್ಟೇ ತಿನ್ನುತ್ತವೆ. ಹುಲಿ ಹಸಿವಾದರೂ ಹುಲ್ಲು ತಿನ್ನುವುದಿಲ್ಲ ಮತ್ತು ಆನೆ ಹಸಿವಾದರೂ ಮಾಂಸ ಭಕ್ಷಣೆ ಮಾಡುವುದಿಲ್ಲ. ಆದ್ದರಿಂದ, ಪ್ರಾಣಿ ಪಕ್ಷಿಗಳು ಸಾಮಾನ್ಯವಾಗಿ ರೋಗ ಮುಕ್ತವಾಗಿ, ಎಲ್ಲವೂ ಒಂದೇ ಆಕಾರದಲ್ಲಿ ವಯಸ್ಸಿಗೆ ತಕ್ಕಂತೆ ಇರುವುದನ್ನು ಕಾಣಬಹುದು. ಆದರೆ, ಮನುಷ್ಯನು ಮಾತ್ರ ಹಸಿವಿರಲಿ, ಬಿಡಲಿ ಹೊತ್ತು ಹೊತ್ತಿಗೆ ಹೊಟ್ಟೆಗೆ ತುರುಕಿಕೊಳ್ಳುತ್ತಲೇ ಇರುತ್ತಾನೆ. ಮದುವೆ, ಇತರ ಸಮಾರಂಭಗಳಲ್ಲಿ ತನ್ನ ಮಿತಿ ಮೀರಿ ಬಂದದ್ದನ್ನೆಲ್ಲಾ ಕೇಳಿ ಬಡಿಸಿಕೊಂಡು ಕೊನೆಗೆ ತಿನ್ನಲಾರದೆ ತಿಂದು ಬಾಧೆ ಪಡುವುದು ಸಾಮಾನ್ಯವಾಗಿ ನೋಡಬಹುದು.

ತನ್ನ ಬಾಯಿಚಪಲದಿಂದಲೇ ಅನೇಕ ರೋಗಗಳಿಗೆ ತುತ್ತಾಗಿ ಕಷ್ಟ ಪಡುವುದು ನಿಮಗೆ ಗೊತ್ತು ತಾನೇ? ಅದಕ್ಕೆ ಕೇಳಿದ್ದು, ನೀವು ಯಾವ ರೀತಿ ಉಣಲು ಇಷ್ಟ ಪಡುತ್ತೀರೆಂದು ಎಂದು ಹೇಳಿದಾಗ, ಅವರೆಲ್ಲರೂ ಈಗ ಮತ್ತೊಂದು ಬಾರಿ ಒಕ್ಕೊರಲಿನಿಂದ ಇನ್ನುಮೇಲಂತೂ ನಾವೂ ಪ್ರಾಣಿಗಳಂತೆ ತಿಂದು, ಮಾನವರಂತೆ, ಸಾಧ್ಯವಾದಷ್ಟು ಬೇರೆಯವರಿಗೆ ಉಪದ್ರವವಾಗದಂತೆ ಬಾಳಬೇಕೆಂದು ನಿಶ್ಚಯಿಸಿದ್ದೇವೆ ಎಂದು ಸ್ವಾಮೀಜಿಯ ಮುಂದೆ ಹೇಳಿಕೊಂಡರು.

■